<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>

ಶ್ರೀರಂಗಪಟ್ಟಣ.

ಸಿ.ಸಿ.ಃ 293/2018

ಪಿ. ಡಬ್ಲ್ಯು: 03

ಸಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಆರ್. ಪುಷ್ಪ ರಾಣಿ |
| ತಂದೆ/ಪತಿಯ ಹೆಸರು | ಃ | ಬಿ.ಟಿ. ಶ್ರೀಧರ್ |
| ವಯಸ್ಸು | ಃ | 51 ವರ್ಷ |
| ವೃತ್ತಿ | ಃ | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ, ಮಂಡ್ಯ ಮೆಡಿಕಲ್ ಕಾಲೇಜು |
| ವಾಸ | ಃ | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 18.07.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ಡಿಸೆಂಬರ್ 2010 ರಿಂದ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ ಮಂಡ್ಯ ಮೆಡಿಕಲ್ ಕಾಲೇಜುನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 20.11.2017 ರಂದು ನಾನು ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 11.15 ಸಮಯದಲ್ಲಿ ಕೊಡಿಯಾಲ ಗ್ರಾಮದ ಗೌರಮ್ಮ ಕೋಂ ರಾಮೇಗೌಡ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ತನ್ನ ಸಹೋದರಿ ಪುಟ್ಟಮ್ಮ ಎನ್ನುವವರ ಜೊತೆ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದು ನಾನು ಅವರನ್ನು ಚಿಕಿತ್ಸೆಗೆ ಒಳಪಡಿಸಿರುತ್ತೇನೆ. ನಾನು ಆಕೆಗೆ ಚಿಕಿತ್ಸೆಗೆ ಒಳಪಡಿಸಿದಾಗ-

1) ಎಡಮುಖದ ಮೇಲೆ ನೋವಿನಿಂದ ಕೂಡಿದ ಗಾಯ

2) ಎಡ ತೊಡೆಯ ಮಧ್ಯಭಾಗದಲ್ಲಿ ನೀಲಿ ಕಟ್ಟಿದ ಊತ ಮತ್ತು ನೋವಿನಿಂದ ಕೂಡಿದ ಬಾಸುಂಡೆ.

ಸದರಿ ಗಾಯಗಳು ಸುಮಾರು 16 ಗಂಟೆಗಳ ಹಿಂದೆ ಆಗಿರುವಂತಹುದು ಆಗಿತ್ತು. ಗಾಯಾಳುವಿಗೆ ಪ್ರಥಮ ಚಿಕಿತ್ಸೆಗೆ ಒಳಪಡಿಸಿ ಆಕೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಗಾಯಾಳುವನ್ನು ಪರೀಕ್ಷೆಗೆ ಒಳಪಡಿಸಿದ್ದ ನಂತರ ಆಕೆಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

ನಾನು ಗಾಯಾಳುವನ್ನು ಪರೀಕ್ಷೆಗೆ ಒಳಪಡಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಗಾಯಾಳುವಿನ ಗಾಯದ ಪ್ರಮಾಣಪತ್ರವನ್ನು ಪೋಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ಗಾಯ

ಪ್ರಮಾಣ ಪತ್ರ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಗಾಯ ಪ್ರಮಾಣ ಪತ್ರವನ್ನು ನಿಪಿ.2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2-ಎ ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಸಿ.ಕೆ.ಎಸ್. ವಕೀಲರಿಂದ**

ಗಾಯಾಳುವನ್ನು ಪರೀಕ್ಷೆ ಮಾಡಿದ ದಿನವೇ ನಾನು ಪೋಲೀಸರಿಗೆ ಮಾಹಿತಿ ನೀಡಿದ್ದೇನೆ. ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದಂತಹ ಸಂದರ್ಭದಲ್ಲಿ ಗಾಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತಹ ಗಾಯಗಳು ಆಗುವ ಸಾಧ್ಯತೆಗಳು ಇವೆ ಎಂದರೆ ಸಾಕ್ಷಿಯು ಗಾಯ ಪ್ರಮಾಣ ಪತ್ರದಲ್ಲಿರುವ ಮೊದಲನೇ ಗಾಯ ಆಗಬಹುದು ಎಂದು ನುಡಿಯುತ್ತಾರೆ. ಮೇಲಿಂದ ಬಿದ್ದಂತಹ ಸಂದರ್ಭದಲ್ಲಿ ಎರಡನೇ ಗಾಯವಾಗುವ ಸಾಧ್ಯತೆ ಇದೆ ಎಂದರೆ ಸರಿ. ಗಾಯಾಳುವಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಗಾಯ ಪ್ರಮಾಣ ಪತ್ರವನ್ನು ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.